**ಪಿಡಬ್ಲ್ಯೂ:1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿಃ 31.01.2023**

ಪಾಟೀ ಸವಾಲು : ಪ್ರತಿವಾದಿ ಪರಃ ಶ್ರೀ ಕೆ ಎಸ್ ಎ ವಕೀಲರಿಂದಃ

ದಾವಾ ಸ್ಥಿರಾಸ್ತಿಯ ಸ.ನಂ.109/6 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ. ನಮಗೆ ಸೇರಿದ ಆಸ್ತಿ 4.79 ಎಕ್ರೆ. ಪಾಲು ಪಟ್ಟಿಯ ಪ್ರಕಾರ ಸದ್ರಿ ಸ್ಥಿರಾಸ್ತಿಯು ನಮಗೆ ಸೇರಿದ್ದು. ಪಾಲು ಪಟ್ಟಿಯಲ್ಲಿ ಸದ್ರಿ ಸ.ನಂ.109/6 ರ ಅಂಶ ಬೇರೆ ಬೇರೆ ಶೆಡ್ಯೂಲ್ ನಲ್ಲಿ ಎಷ್ಟು ವಿಸ್ತೀರ್ಣವನ್ನು ಹಂಚಿಕೊಂಡಿದ್ದೇವೆ ಎಂದು ಹೇಳಲು ಬರುವುದಿಲ್ಲ.

ಸ.ನಂ.109/6 ನ ಆಸ್ತಿಯ ಕುರಿತು ಭೂನ್ಯಾಯಾ ಮಂಡಳಿಯಲ್ಲಿ ಈ ಹಿಂದೆ ಅರ್ಜಿಗಳು ಬಾಕಿ ಇದ್ದು ಪ್ರಸ್ತುತ ತಿರ್ಮಾನವಾಗಿದೆ. ಕರಿಯ ಶೆಟ್ಟಿ ಮತ್ತು ಕಿಟ್ಟಿ ಶೆಡ್ತಿ ಭೂ ನ್ಯಾಯಾಮಂಡಳಿಯಲ್ಲಿ ಅರ್ಜಿಸಲ್ಲಿಸಿದ್ದರು ಎಂದರೆ ಕರಿಯ ಶೆಟ್ಟಿ ಸಲ್ಲಿಸಿರುತ್ತಾರೆ. ಕಿಟ್ಟಿ ಶೆಡ್ತಿ ಎನ್ನುವವರು ನನ್ನ ಬಾಡಿಗೆ ದಾರರಾಗಿರಲಿಲ್ಲ. ಕರಿಯ ಶೆಟ್ಟಿ ಮತ್ತು ಕಿಟ್ಟಿ ಶೆಡ್ತಿ ಸಹೋದರ ಸಹೋದರಿಯರು ಎಂದರೆ ಸರಿ. ಕಿಟ್ಟಿ ಶೆಡ್ತಿ ಸಲ್ಲಿಸಿದ ಅರ್ಜಿ ಭೂ ನ್ಯಾಯಾ ಮಂಡಳಿಯಲ್ಲಿ ತೀರ್ಮಾನವಾಗಿಲ್ಲ. ಶ್ರೀಮತಿ ಹೆಗ್ಗಡತಿ ಎಂದರೆ ನನ್ನ ತಾಯಿ. ನಾನು ಹೈಕೋರ್ಟ್ ನಲ್ಲಿ ಕಿಟ್ಟಿ ಶೆಡ್ತಿ ವಿರುದ್ಧ ಸಲ್ಲಿಸಿರುವ WP No.28727/2011 ರಲ್ಲಿರುವ ಅರ್ಜಿದಾರ ಹರಿಶ್ಚಂದ್ರ ಹೆಗ್ಡೆ ಎಂದರೆ ನಾನೆ. WP No.28727/2011 ರಲ್ಲಿ ಕಾಣಿಸಿರುವ 4 ರಿಂದ 11 ನೇ ಎದುರುದಾರರು ಕರಿಯ ಶೆಟ್ಟಿಯವರ ಮಕ್ಕಳು. WP No.28727/2011 ರಲ್ಲಿ 3 ನೇ ಎದುರುದಾರರು ಕಿಟ್ಟಿ ಶೆಡ್ತಿ ಎಂದರೆ ಕರಿಯ ಶೆಟ್ಟಿಯವರ ಸಹೋದರಿ. WP No.28727/2011 ಕರಿಯ ಶೆಟ್ಟಿ ಮತ್ತು ಅವರ ಸಹೋದರಿಯ ವಿರುದ್ದ ಮಾಡಿದ

ಮೇಲ್ಮನವಿ ಎಂದರೆ ಸರಿ. WP No.28727/2011 ರ ದೃಢೀಕೃತ ಪ್ರತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣಿಸಿರುವ 3(1) ರಿಂದ 3(3) ಕಿಟ್ಟಿ ಶೆಡ್ತಿಯವರ ಮಕ್ಕಳು ಎಂದರೆ ಸರಿ. ಕಿಟ್ಟಿ ಶೆಡ್ತಿಯವರ ವಿಳಾಸ ತೋಟದ ಮನೆಯದ್ದು ಎಂದರೆ ಸರಿ. ಈ ದಾವೆಯ ಪ್ರತಿವಾದಿ ವಿಜಯ್ ಶೆಟ್ಟಿ ಸರೋಜಿನಿಯವರು ಮಗ ಎಂದರೆ ಸರಿ. ಸದ್ರಿ ಮೇಲ್ಮನವಿಯಲ್ಲಿ ಸ.ನಂ.109/6 ರ ಅಂಶ 1.56 ಸೆಂಟ್ಸ್ ಸ್ಥಿರಾಸ್ತಿಗಳು ಇತ್ತು. ಸ.ನಂ. 109/6 ರಲ್ಲಿ ಮೂಲತಃ ನಮಗೆ ಹಕ್ಕು ಬಂದ ಬಗ್ಗೆ ದಾಖಲೆ ಇದೆ. ಆ ದಾಖಲೆ ನನ್ನ ತಾಯಿ ಮತ್ತು ಅಣ್ಣನ ನಡುವೆ ನೊಂದಾಣಿ ಆದ ಪಾಲು ವಿಭಾಗ. ಸದ್ರಿ ದಾಖಲೆಯನ್ನು ನಾಯಾಲಯಕ್ಕೆ ಹಾಜರುಪಡಿಸಬಹುದು. ಸದ್ರಿ ಸರ್ವೆ ನಂಬರಿನಲ್ಲಿ ನನ್ನ ತಾಯಿಗೆ ಹಾಗೂ ಅಣ್ಣನಿಗೆ ಎಷ್ಟು ವಿಸ್ತೀರ್ಣದ ಆಸ್ತಿ ಬಂದಿತ್ತು ಎಂದು ದಾಖಲೆ ನೋಡದೆ ಹೇಳಲು ಆಗುವುದಿಲ್ಲ. ಸದ್ರಿ ಸರ್ವೆನಂಬರಿನಲ್ಲಿ ನನ್ನ ತಾಯಿಗೆ ಅಂದಾಜು 13 ಎಕ್ರೆ ಸ್ಥಿರಾಸ್ತಿ ಬಂದಿತ್ತು. ಸದ್ರಿ ಸರ್ವೆನಂಬರಿನಲ್ಲಿ ಭೂ ನ್ಯಾಯಾ ಮಂಡಳಿಯಲ್ಲಿ ಎಷ್ಟು ಅರ್ಜಿದಾರರಿಗೆ ಮಂಜೂರಾಗಿದೆ ಎಂದು ಗೊತ್ತಿದೆ, ಆದರೆ ಎಷ್ಟು ವಿಸ್ತೀರ್ಣದ ಹಾಗೂ ಯಾವ ಯಾವ ಬದಿಗಳಲ್ಲಿ ಸ್ಥಿರಾಸ್ತಿ ಮಂಜೂರಾಗಿದೆ ಎಂದು ಗೊತ್ತಿಲ್ಲ. ಸ.ನಂ.109/6 ರಲ್ಲಿ 13.79 ಎಕ್ರೆ ಸ್ಥಿರಾಸ್ತಿಯನ್ನು ಪಾಲು ಪಟ್ಟಿ ಮಾಡಲಾಗಿದೆ. ನಮ್ಮೊಳಗೆ ಆದ ಪಾಲು ವಿಭಾಗದಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಸ್ಥಿರಾಸ್ತಿಗಳು ವಿಭಾಗಿಸಲಾಗಿದೆ ಹಾಗೂ ಅವುಗಳ ಗಡಿಗಳನ್ನು ಹೇಳಲು ಸಾಧ್ಯವಿಲ್ಲ.

ತೋಟದ ಮನೆ ಎಂದರೆ ಸ.ನಂ.109/6 ತಾಗಿರುವ ಸ್ಥಿರಾಸ್ತಿಯಲ್ಲಿ ಇದೆ ಆದರೆ ಯಾವ ದಿಕ್ಕಿನಲ್ಲಿ ಇದೆ ಎಂದು ಹೇಳಲು ಸಾಧ್ಯವಿಲ್ಲ. ಸ.ನಂ.109/6(D) ಸ್ಥಿರಾಸ್ತಿ ಪಶ್ಚಿಮ ಪಾರ್ಶ್ವದಲ್ಲಿ ಕಾರ್ಕಳ ದಿಂದ ಹೆಬ್ರಿಗೆ ಹೋಗುವ ಡಾಂಬರು ರಸ್ತೆ ಇದೆ. ಸ.ನಂ.109/6 ರಲ್ಲಿ ಸುಮಾರು 6-7 ಜನರ ಮನೆ ಇದೆ. ಅವರ ಹೆಸರು ಗಳನ್ನು

ಹೇಳಲು ಬರುವುದಿಲ್ಲ. ತೋಟದ ಮನೆಗೆ ಸಂಪರ್ಕ ಕಲ್ಪಿಸುವ ದಾರಿ ಸ.ನಂ.109/6 ರಲ್ಲಿ ಇದೆ ಎಂದರೆ ಸರಿಯಲ್ಲ. ತೋಟದ ಮನೆಗೆ ರಸ್ತೆ ಇಲ್ಲ. ಬೇರೆಯವರ ಜಾಗದ ಮೂಲಕ ಹೋಗುತ್ತಾರೆ. ಸ.ನಂ. 109/6 ರಲ್ಲಿ 3-4 ರಸ್ತೆ ಇರುತ್ತದೆ. ಸದ್ರಿ 3-4 ರಸ್ತೆಗಳು ಯಾರ ಮನೆಗೆ ಹೋಗುತ್ತವೆ ಎಂದು ಹೇಳಲು ಬರುವುದಿಲ್ಲ. ಆದರೆ ತೋಟದ ಮನೆಗೆ ಹೋಗುವ ರಸ್ತೆ ಇಲ್ಲ. ತೋಟದ ಮನೆ ಎಂದರೆ ಒಂದು ಮನೆ ಇದೆ ಮತ್ತು ಅದರಲ್ಲಿ ಪ್ರಸ್ತುತ ಯಾರು ವಾಸ ಇದ್ದಾರೆ ಎಂದು ಗೊತ್ತಿಲ್ಲ. ಸದ್ರಿ ತೋಟದ ಮನೆಯಲ್ಲಿ ದಾವೆ ಮಾಡುವ ಕಾಲಕ್ಕೆ ಕರಿಯ ಶೆಟ್ಟಿ, ಸುನಂದ ಶೆಟ್ಟಿ ಇದ್ದರು. ಈ ಹಂತದಲ್ಲಿ ಸಾಕ್ಷಿಗೆ ಭಾವಚಿತ್ರವನ್ನು ತೋರಿಸಿದ್ದು ಸದ್ರಿ ಭಾವಚಿತ್ರದಲ್ಲಿ ಕಂಡು ಬರುವ ಮನೆ ಯಾರದ್ದು ಎಂದು ಕೇಳಲಾಗಿ ಹೆಸರು ಬರೆಯದೆ ಮನೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಕರಿಯ ಶೆಟ್ಟಿಯವರ ಸ್ಥಿರಾಸ್ತಿಯು ಅವರ ಮಕ್ಕಳ ಬಳಿ ಇದೆ. ನಮ್ಮ ಮತ್ತು ಕರಿಯ ಶೆಟ್ಟಿಯವರ ಮಕ್ಕಳ ನಡುವೆ ಸಂಬಂಧ ಹೇಗೆ ಇದೆ ಎಂದರೆ ಸಾಕ್ಷಿಯು ಅವರು ಅವರಷ್ಟಕ್ಕೆ ಇದ್ದಾರೆ ನಾನು ನಮ್ಮಷ್ಟಕ್ಕೆ ಇದ್ದೇವೆ ಎಂದು ನುಡಿಯುತ್ತಾರೆ. ಭೂ ನ್ಯಾಯಾಮಂಡಳಿಯಲ್ಲಿ ತಾಯಿಯ ಪರವಾಗಿ ನಾನು ಹಾಜರಾಗುತ್ತಿದ್ದೆ. ಭೂ ನ್ಯಾಯಾಮಂಡಳಿಯಲ್ಲಿ ಹೆಸರಿಸಿದ ಮುದರ ಹಾಂಡ, ಹೊನ್ನಯ್ಯ ಶೆಟ್ಟಿ, ರಾಮ ನಾಯ್ಕ ಎಂದರೆ ಒಕ್ಕಲುಗಳು. ಸಾಕ್ಷಿಯು ರಾಮ ನಾಯ್ಕ ಅಲ್ಲ ಶ್ಯಾಮ ನಾಯ್ಕ ಹಾಗೂ ಕರಿಯ ಶೆಟ್ಟಿಯವರು ಕೂಡ ಒಕ್ಕಲಾಗಿದ್ದರು ಎಂದು ನುಡಿಯುತ್ತಾರೆ. ಮುದರ ಹಾಂಡ, ಹೊನ್ನಯ್ಯ ಶೆಟ್ಟಿ, ರಾಮ ನಾಯ್ಕ ರವರಿಗೆ ಸ.ನಂ.109/6 ರಲ್ಲಿ ಎಷ್ಟು ಸ್ಥಿರಾಸ್ತಿಯು ಭೂ ನ್ಯಾಯಾ ಮಂಡಳಿಯಲ್ಲಿ ಮಂಜೂರಾಗಿದೆ ಎಂದು ಗೊತ್ತಿಲ್ಲ. ಭೂ ನ್ಯಾಯಾ ಮಂಡಳಿಯಲ್ಲಿ ಮಂಜೂರಾದ ಸ್ಥಿರಾಸ್ತಿಗಳ ನಕ್ಷೆಗಳು ನನ್ನ ಬಳಿ ಇದೆ. ಭೂ ನ್ಯಾಯಾ ಮಂಡಳಿಯ ಆದ ತೀರ್ಪಿನ ಪ್ರತಿಯು ನನ್ನ ಬಳಿ ಇದೆ. ಭೂ ನ್ಯಾಯಾ ಮಂಡಳಿಯಲ್ಲಿ ಮಂಜೂರಾದ ನಕ್ಷೆಗಳನ್ನು

ನಾನು ಈ ವರೆಗೆ ನೋಡಿಲ್ಲ. ಭೂ ನ್ಯಾಯಾ ಮಂಡಳಿಗೆ ನನ್ನ ತಾಯಿಯ ಪರವಾಗಿ ನಾನೇ ಹಾಜರಾಗುತ್ತಿದ್ದೆ ಎಂದರೆ ಸರಿ. ಹೈಕೋರ್ಟಿಗೆ ಮೇಲ್ಮನವಿಗೆ ಕೂಡ ನಾನೇ ಹೋಗಿರುತ್ತೇನೆ. ಪಾಲು ವಿಭಾಗ ಮಾಡಲು ಆಧರಿಸಿದ ನಕ್ಷೆ ಯಾವುದು ಹಾಗೂ ಶೆಡ್ಯೂಲ್ ಗಳನ್ನು ವಿಭಾಗಿಸಲು ಆಧರಿಸಿದ ನಕ್ಷೆ ಯಾವುದು ಎಂದು ಹೇಳಲು ಬರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ